


**ಎಡದಿಂದ ಬಲಕ್ಕೆ**

1. ಆ ಮನೆಯ ಹೊರಗಿನ ಅಲಂಕಾರ, ಎಂಥ ಸುಂದರ! 4
3. ಏನೇ ಆದರೂ ಕಣ್ಣೆರುಗರೆಯಬಾರದೆಂಬ ಒಪ್ಪಂದ ಆಗಿದೆ 3
4. ಪುನಃ ಮಾಲೆ ಧರಿಸಿ ಮೆರೆದದ್ದು ಎಂಥ ಸೊಕ್ಕು, ಗರ್ವ! 3
6. ಹೊನ್ನಿಗೂ ಇಲ್ಲದಷ್ಟು ಮಹತ್ವ ಅಲ್ಲಿ, ತೊಟ್ಟು ಜಲಕ್ಕೆ 4
7. ಎದ್ದದ್ದು, ಬಂದದ್ದು, ತಂದದ್ದು... ಎಲ್ಲ ಹೇಗೆ ಹೇಗೋ 4
9. ಕಾವಲಿನ ಕೆಲಸ ಮಾಡಿದ್ದು ಸ್ವಲ್ಪವೇ ಸಮಯ 4
12. ಹಲವು ಬಣ್ಣಗಳನ್ನು ಕೊಳ್ಳಲು ಬೇಕೇ ಬೇಕು 'ದುಡ್ಡಿನ ಶಕ್ತಿ' 4
14. ಎಲ್ಲದರಲ್ಲೂ ಗಾಬರಿ. ಏಕೆಂದರೆ ಆತ ಬಡವ 3
15. ಹಳೆಯ ವಸ್ತುಗಳಲ್ಲಿ ಸೇರಿಹೋಗಿತ್ತು, ಈ 'ಸಾಗರ ರತ್ನ' 3
16. ಗಣಿ ಕಾರ್ಯ ಮಾಡುವವರಿಗೆಲ್ಲ ಆತ ಆಪ್ತ ಮಿತ್ರ 4

**ಮೇಲಿನಿಂದ ಕೆಳಕ್ಕೆ**

1. ಮಂದ್ರ ಸ್ಥಾಯಿಯ ಕಂಠ ಸ್ವರ, ಮತ್ತೆ ಮತ್ತೆ ಕೇಳಿಸಿದರೆ? 4
2. ಮಾಣಿಕ್ಯದ ಅಲಂಕಾರ, ಎಷ್ಟು ರಮ್ಯವಾಗಿದೆ ನೋಡಿದಿರಾ? 4
3. ಕರ್ತವ್ಯ ನಿರ್ವಹಣೆಯಲ್ಲೇ ಮಗ್ನ, ಸೃಷ್ಟಿಕರ್ತ ಕೂಡ 3
5. ಬೆಟ್ಟದ ತಪ್ಪಲನ್ನು ಹಿಂದು ಮುಂದಾಗಿಯಾದರೂ ಹೋಗಿ ಸೇರು 3
6. ನರಹರಿಗೆ ಏಕೆ ಕಾಣಿಸಲಿಲ್ಲ ನಕ್ಷತ್ರಗಳ ಜನ್ಮನೆಲೆ? 4
8. ದೇವರ ಮನೆಯ ಬಾಗಿಲನ್ನು ಕಾಯುವವ ಹೇಗೆ? 4
10. ಲಾಗ ಹೊಡೆದವರಿಗೆಲ್ಲ ಬಹುಮಾನ ಖಾರದ ಸಾಂಬಾರ 3
11. ಬಗಲಲ್ಲಿ ಹಿಡಿದು ಸಾಗಿಸುವ ರೀತಿ, ನಡೆಯಿತು ಬೇಗ ಬೇಗ 4
12. ವಿಷ್ಣುವೂ ಈಶ್ವರನೂ ಅಕ್ಕಪಕ್ಕ ಅದಾವ ಊರು? 4
13. ಆ ದೇಶದಲ್ಲಿ ಬಡವರ ಸಂಖ್ಯೆಯೇ ತುಂಬ ಅಧಿಕ 3

## 05—01—2022 ಉತ್ತರಗಳು

**ಎಡದಿಂದ ಬಲಕ್ಕೆ**

1. ನಿರುಪಮ 3. ನಿರ್ಭಯ 4. ಧುಮುಕು 6. ಮಧುಕರ 7. ತಾರಕ 9. ಶರಧಿ 11. ತುಮುಲ 13. ಕರಟ 15. ಅನುಕೂಲ 17. ಸುಲಭ 18. ಕುಶಿತ 19. ಯಶೋಗಾನ

**ಮೇಲಿನಿಂದ ಕೆಳಕ್ಕೆ**

1. ನಿಯಮ 2. ಮಧುರ 3. ನಿರ್ಧಾರ 5. ಕುವರ 7. ತಾಕೀತು 8. ಕಮಲ 9. ಶತಕ 10. ಧಿಕಿಟ 12. ಮುನಿಸು 14. ರಕ್ಷಿತ 15. ಅಭಯ 16. ಲಕುನ (ನಕುಲ ತಲೆಕೆಳಗು)

ಪ್ರಶ್ನಾಂಕಣ

# ಯಾರಿಗೆ ಸೇರಿದ್ದು ಚಂದ್ರ?

ಚಂದ್ರ (ಚಿತ್ರ 1, 2) ಅದು ಯಾವುದೇ ವ್ಯಕ್ತಿಯ ಅಥವಾ ಯಾವುದೇ ಒಂದು ರಾಷ್ಟ್ರದ ಆಸ್ತಿ ಅಲ್ಲ. ಚಂದ್ರನ ನೆಲವನ್ನು, ಚಂದ್ರನಲ್ಲಿ ಬೇಕೆನಿಸಿದಷ್ಟು ಜಾಗವನ್ನು ಯಾವ (ಮೂರ್ಖರು) ಬೇಕಾದರೂ ಕೊಳ್ಳಬಹುದು; ಯಾವ (ಜಾಣ ವಂಚಕರು) ಬೇಕಾದರೂ ಮಾರಲೂಬಹುದು! ಏಕೆಂದರೆ ಚಂದ್ರನ ನೆಲವನ್ನು ಕೊಂಡಿದ್ದರ, ಮಾರಿದ್ದರ, ಮಾಲೀಕತ್ವದ ಯಾವ ದಾಖಲೆಗೂ, ಎಲ್ಲೂ, ಯಾವ ಮಾನ್ಯತೆಯೂ ಇಲ್ಲ. ಸ್ಪಷ್ಟವಾಗಿಯೇ, ಚಂದ್ರನ ನೆಲವನ್ನು ಕುರಿತ ಯಾವ ವ್ಯಾಜ್ಯವನ್ನೂ ಯಾವ ನ್ಯಾಯಾಲಯವೂ ಸ್ವೀಕರಿಸುವುದೂ ಇಲ್ಲ. ಹಾಗಿದ್ದರೂ ಕೆಲವಾರು ಜನ ಚಂದ್ರನ 'ರಿಯಲ್ ಎಸ್ಟೇಟ್' ಅನ್ನು ಮಾರಲು ಯತ್ನಿಸಿದ್ದಾರೆ; ಕೊಳ್ಳಲು ಮುಂದೆ ಬಂದವರೂ ಇದ್ದಾರೆ!

1955ರಲ್ಲಿ ನಡೆದ ಅಂಥದೊಂದು ಪ್ರಯತ್ನ ಬಹಳ ಪ್ರಸಿದ್ಧ. ವಿಖ್ಯಾತ 'ಅಮೆರಿಕನ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ'ಗೆ ಸೇರಿದ 'ಹೇಡನ್ ಪ್ಲಾನೆಟೇರಿಯಂ'ನ ಆಗಿನ ಮುಖ್ಯಸ್ಥ 'ರಾಬರ್ಟ್ ಆರ್ ಕೋಲ್ಸ್' ಆ ವರ್ಷ ಚಂದ್ರನ ಜಮೀನನ್ನು ಒಂದು ಎಕರೆಗೆ ಒಂದು ಡಾಲರ್‌ನಂತೆ ಮಾರಾಟಕ್ಕೆ ಇಟ್ಟಿದ್ದರು! (ಆಗ ಇನ್ನೂ ಬಾಹ್ಯಾಕಾಶ ಯುಗ ಆರಂಭವೂ ಆಗಿರಲಿಲ್ಲ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ)

ವಾಸ್ತವವಾಗಿ 1957ರಲ್ಲಿ ಆಗಿನ ಸೋವಿಯತ್ ಒಕ್ಕೂಟ ವಿಶ್ವದ ಪ್ರಪ್ರಥಮ ಕೃತಕ ಉಪಗ್ರಹ ಸ್ಪೂಟ್ನಿಕ್ ಅನ್ನು ಬಾಹ್ಯಾಕಾಶಕ್ಕೆ ಹಾರಿಸಿದೊಡನೆ ಜಗದಾದ್ಯಂತ ತುಂಬ ಕುತೂಹಲದ ಹೊಸದೊಂದು ಪ್ರಶ್ನೆ ಉದ್ಭವಿಸಿತು: ಭೂ ವಾತಾವರಣದಾಚಿನ ಬಾಹ್ಯಾಕಾಶ ಮತ್ತು ಭೂಮ್ಯೇತರ ಬಾಹ್ಯಾಕಾಶ ಕಾಯಗಳ ಮಾಲೀಕರು ಯಾರು? ಅಂತಹ ಸ್ಥಿರಾಸ್ತಿಗಳ ಮಾಲೀಕತ್ವವನ್ನು ಪಡೆಯುವುದು ಹೇಗೆ? ಅದನ್ನು ಕುರಿತಂತೆ ಒಂದು ಅಂತರರಾಷ್ಟ್ರೀಯ ಒಪ್ಪಂದ 1967ರಲ್ಲಿ ಸಿದ್ಧವಾಯಿತು. ದಿ ಔಟರ್ ಸ್ಪೇಸ್ ಟ್ರೀಟಿ (The Outer Space Treaty) ಎಂಬ ಆ ಜಾಗತಿಕ ಒಪ್ಪಂದ ವೈಜ್ಞಾನಿಕ ಅನ್ವೇಷಣೆಗಳಿಗಾಗಿ ಬಾಹ್ಯಾಕಾಶ ಪ್ರದೇಶವನ್ನು ಮತ್ತು ಚಂದ್ರನೂ ಸೇರಿದಂತೆ ಎಲ್ಲ ಜ್ಞಾತಾಜ್ಞಾತ ವ್ಯೋಮಕಾಯಗಳನ್ನು ಬಳಸುವ ಬಗೆಗೆ ಮಾರ್ಗಸೂಚಿ ನಿಯಮಗಳನ್ನು ಒಳಗೊಂಡಿದೆ. ಇದೇ ಒಪ್ಪಂದದ ಪ್ರಕಾರ ಯಾವ ವ್ಯಕ್ತಿಯೇ ಆಗಲೀ, ಯಾವ ರಾಷ್ಟ್ರವೇ ಆಗಲಿ ಚಂದ್ರ ಅಥವಾ ಬೇರಾವುದೇ ವ್ಯೋಮ ಕಾಯದ ಮೇಲೇ ಆಗಲೀ ಮಾಲೀಕತ್ವ ಘೋಷಿಸುವಂತಿಲ್ಲ. ವೈಜ್ಞಾನಿಕ ಉದ್ದೇಶಗಳಿಗಾಗಿ ಮಾತ್ರ ಅಲ್ಲಿ ಯಾವುದೇ ನಿರ್ಮಾಣ ಮಾಡಬಹುದಾದರೂ ಅದು ಎಲ್ಲ ರಾಷ್ಟ್ರಗಳ ಬಳಕೆಗೂ ಲಭ್ಯ ಇರಬೇಕು (ಚಿತ್ರ 3, 4).




ವಿಪರ್ಯಾಸ ಏನೆಂದರೆ, ದಿ ಔಟರ್ ಸ್ಪೇಸ್ ಟ್ರೀಟಿ ಒಪ್ಪಂದಕ್ಕೆ ಯಾವುದೇ ಕಾನೂನಾತ್ಮಕ ಮನ್ನಣೆ ಇಲ್ಲ. ಹಾಗಾಗಿ ಈ ಒಪ್ಪಂದವನ್ನು ಉಲ್ಲಂಘಿಸಿ ವರ್ತಿಸುವ ಯಾವ ವ್ಯಕ್ತಿಯ ಮೇಲೂ, ಯಾವುದೇ ರಾಷ್ಟ್ರದ ಮೇಲೂ ಯಾವುದೇ ಕಾನೂನು ಕ್ರಮವೂ ಸಾಧ್ಯವೂ ಇಲ್ಲ!

■ ಎನ್‌. ವಾಸುದೇವ್